# ಅಜ್ಜಿಯೊಳಗೊಬ್ಬಳು ಶಿಷ್ಯೆ–ಮಹಾಗುರು



■ ಸ್ವಯಂಪ್ರಭಾ

ಮೇಲಿನ ಮನೆ ಅಜ್ಜಿ ನೋಡಲಿಕ್ಕೆ ಅಜ್ಜಿಯಂತೇನೂ ಇಲ್ಲ. ಇನ್ನೂ ಅರವತ್ತರ ಗಡಿಯಲ್ಲಿರುವ ಅವರು ಉತ್ಸಾಹಿ ಮಹಿಳೆ. ಮನೆಯಲ್ಲಿ ಒಬ್ಬರೇ ಇರುವುದಾದರೂ ಸದಾ ಓದುವುದರಲ್ಲಿಯೇ ಮಗ್ನರು. 'ಚಿಕ್ಕಂದಿನಲ್ಲಿ ಓದಲು ಸಾಧ್ಯವಾಗಲಿಲ್ಲ, ಈಗಲಾದರೂ ಸಾಧ್ಯವಾದಷ್ಟು ಓದಬೇಕು' ಎಂದು ಆಗಾಗ ಹೇಳುವರು.

ಅಷ್ಟೇ ಅಲ್ಲ, ಓದುವ ಖುಷಿಯನ್ನು ಎಲ್ಲರೊಡನೆ ಹಂಚಿಕೊಳ್ಳುತ್ತ 'ನೀವೂ ಒಂದು ಪುಸ್ತಕ ಓದಿ' ಎಂದು ಹೇಳುವುದಲ್ಲದೆ, ಎದುರಿನವರ ಗ್ರಹಿಕೆ ಹೇಗಿರಬಹುದು ಎಂಬುದನ್ನು ಊಹಿಸಿ ಅವರಿಗೊಂದು ಪುಸ್ತಕವನ್ನೂ ಕೊಡುತ್ತಾರೆ.

ಅವರ ಮೊಮ್ಮಗ ಏಳನೇ ತರಗತಿಯ ಹುಡುಗ. ಅಜ್ಜಿ ಮತ್ತು ಮೊಮ್ಮಗ ಇಬ್ಬರೂ ಸಂಸ್ಕೃತವನ್ನು ಖಾಸಗಿಯಾಗಿ ಕಲಿಯುವ ತರಗತಿಯಲ್ಲಿ ಪೈಪೋಟಿಗೆ ಬಿದ್ದಿದ್ದಾರೆ. ಮೊಮ್ಮಗ ಆದಿತ್ಯ, ಕೈಯಲ್ಲಿ ಒಂದು ಪೆನ್ಸಿಲ್ ಹಿಡಿದು, ಅಜ್ಜಿಯ ನೋಟ್ಸ್ ಅನ್ನು ಕಣ್ಣಲ್ಲಿ ಕಣ್ಣಿಟ್ಟು ಪರಿಶೀಲನೆ ಮಾಡುತ್ತಾನೆ. 'ನೋಡಜ್ಜೀ, ವಿಭಕ್ತಿ ಪ್ರತ್ಯಯ ಸರಿ ಗೊತ್ತಿಲ್ಲ ನಿಂಗೆ. ಅದನ್ನು ಇನ್ನೂ ಬಾಯಿಪಾಠ ಮಾಡಬೇಕು' ಎಂದು ಸೂಚನೆ ಕೊಡುತ್ತಾನೆ.

'ಹೌದು... ಅದೇಕೋ ಈ ವಯಸ್ಸಲ್ಲಿ ಎಷ್ಟು ಕಲಿತರೂ ಬಾಯಿಪಾಠ ಆಗುವುದಿಲ್ಲಪ್ಪ. ಹೋಗಲಿ ಬಿಡು, ಒಟ್ಟಿನಲ್ಲಿ ಸಂಸ್ಕೃತ ಓದಲು ನನಗೆ ಬರಬೇಕು ಅಷ್ಟೇ' ಎಂದು ಅಜ್ಜಿ ಹೇಳಿದರೆ, 'ಹಾಗೆಲ್ಲ ಮಾಡಬೇಡ, ಪರೀಕ್ಷೆಯಲ್ಲಿ ಮಾರ್ಕ್ಸ್ ಕಳಕೋತಿ ಅಷ್ಟೇ...' ಎಂದು ಮೊಮ್ಮಗ ಬುದ್ಧಿ ಹೇಳುತ್ತಾನೆ.

'ಮಾರ್ಕ್ಸ್ ಎಲ್ಲ ನನಗೇಕೆ ಮಗಾ... ವಿಷಯ ಕಲಿತರೆ ಸಾಕು ಎಂದು ಈ ತರಗತಿಗೆ ನಾನು ಸೇರಿದ್ದು' ಅಂತ ಹೇಳಬೇಕು ಎಂದುಕೊಂಡರೂ ಅಜ್ಜಿ ಹಾಗೆ ಹೇಳುವುದಿಲ್ಲ. ಮತ್ತೆ ನನಗೇಕೆ ಶಾಲೆಯಲ್ಲಿ ಅಂಕ ಗಳಿಸಬೇಕೆಂದು ಹೇಳುತ್ತೀರಿ ಎಂಬ ಚೂಟಿ ಪ್ರಶ್ನೆ ಹಾಕದೇ ಬಿಡುವವನಲ್ಲ ಈ ಮೊಮ್ಮಗರಾಯ.

'ಹೌದೌದು ಕಲೀತೇನೆ... ನಿನಗೆ ಇದೆಲ್ಲ ಗೊತ್ತಿದೆಯೇ...' ಎಂದು ಅಜ್ಜಿಯ ಮರುಪ್ರಶ್ನೆ. ತನಗೆ ಗೊತ್ತಿದೆ ಎಂದು ಹೇಳಿಕೊಳ್ಳುವುದೆಂದರೆ ಮಕ್ಕಳಿಗೆ ಅದೆಂತಹುದೋ ಸಂಭ್ರಮ. ಅವನು ಹುಮ್ಮಸ್ಸಿನಿಂದ ಅಜ್ಜಿಗೆ ಪೂರ್ತಿ ಪ್ರತ್ಯಯ ಪಟ್ಟಿ ಒಪ್ಪಿಸುತ್ತಾನೆ. ಅಜ್ಜಿ ಮೊಮ್ಮಗನ ಕಲಿಕೆಯ ಜುಗಲಬಂದಿಯನ್ನು ನೋಡಿ ಅಮ್ಮನಾದವಳಿಗೆ ನಗು. ನೋಟ್ಸ್‌ನಲ್ಲಿ ಅಜ್ಜಿ ಎಷ್ಟು ಮಿಸ್ಟೇಕ್ ಮಾಡಿದ್ದಾರೆ ಎಂದು ಹೇಳುವುದೆಂದರೆ ಮೊಮ್ಮಗನಿಗೆ ಉತ್ಸಾಹ. ಮೊಮ್ಮಗ ಹೀಗೆ ತನ್ನ ತಪ್ಪು ಕಂಡು ಹಿಡಿಯುವುದನ್ನು ನೋಡಲು ಅಜ್ಜಿಗೆ ಖುಷಿ.

ಈಗ ಅಜ್ಜಿ, ಭೈರಪ್ಪನವರ 'ದಾಟು' ಕಾದಂಬರಿಯ ಕನ್ನಡ ಆವೃತ್ತಿಯನ್ನೂ ಸಂಸ್ಕೃತ ಆವೃತ್ತಿಯನ್ನೂ ತಂದಿಟ್ಟುಕೊಂಡಿದ್ದಾರೆ. ಸಂಸ್ಕೃತದಲ್ಲಿ ಓದುವಾಗ, ಸರಿಯಾಗಿ ಗ್ರಹಿಕೆಯಾಗದೇ ಇದ್ದಾಗ, ಅದನ್ನು ಕನ್ನಡದ ಆವೃತ್ತಿಯಲ್ಲಿ ಓದಿಕೊಳ್ಳುತ್ತಾರೆ. ಆದಿತ್ಯ ಈ ಕಾದಂಬರಿಯನ್ನು ಸಂಸ್ಕೃತದಲ್ಲಿ ಓದಿ ಹೇಳುವಾಗ, ಅಜ್ಜಿ ಕೇಳಿಸಿಕೊಳ್ಳುತ್ತಾರೆ. ಕೆಲವೊಮ್ಮೆ ಅಜ್ಜಿಯೂ ಕಾದಂಬರಿಯನ್ನು ಓದಿ ಹೇಳುತ್ತಾರೆ. ಅವನು ಕೇಳುತ್ತಾನೆ. ಅವರಿಬ್ಬರ ಜುಗಲ್‌ಬಂದಿ ನೋಡುವುದೇ ಒಂದು ಚಂದ.

ಇಬ್ಬರೂ ಬೇರೆ ಬೇರೆ ಹಂತದ ಕಲಿಕೆಯಲ್ಲಿದ್ದಾರೆ. ಅಜ್ಜಿ ಸೀನಿಯರ್, ಮೊಮ್ಮಗ ಜೂನಿಯರ್. ಆದರೂ ಮೊಮ್ಮಗನಿಗೆ, ತಾನು ಅಜ್ಜಿಗಿಂತ ಹೆಚ್ಚು ಅಂಕ ಪಡೆದಿರುವೆ ಎಂದು ಹೇಳಿಕೊಳ್ಳುವ ಛಲ. ಅದಕ್ಕಾಗಿ ಅವನು ಜಿದ್ದಿಗೆ ಬಿದ್ದು ಕಲಿಯುತ್ತಾನೆ.

ಅಜ್ಜಿಗೆ ಕಲಿಯುವುದಕ್ಕೆ ಬೇಕಾದ ಸಲಕರಣೆಗಳನ್ನೂ ಮೊಮ್ಮಗನೇ ತಂದುಕೊಡುತ್ತಾನೆ. ಶ್ಲೋಕಗಳನ್ನು ಬರೆದು ಕಲಿಯಲು, ಬೋರ್ಡ್–ಡಸ್ಟರ್‌ಗಳು, ರಫ್ ಪುಸ್ತಕಗಳು, ಅಜ್ಜಿಗೆ ಇಷ್ಟವಾಗುವ ಇಂಕ್ ಪೆನ್ನುಗಳು, ಪೆನ್ನು–ಪೆನ್ಸಿಲ್ಲು, ರಾತ್ರಿ ಓದುವುದಕ್ಕೆ ಅಜ್ಜಿಗೆ ಅನುಕೂಲವಾಗುವಂತಹ ದೀಪ... ಹೀಗೆ ಅವರಿಬ್ಬರದೊಂದು ಲೋಕ.

ಅಪ್ಪ ಅಮ್ಮನಾಗಿದ್ದಾಗ ಬದುಕು ಕಟ್ಟಿಕೊಳ್ಳುವ ಗಡಿಬಿಡಿ, ದುಡಿಮೆಯ ಚಿಂತೆ, ಧಾವಂತ ಎಲ್ಲವುಗಳ ಜೊತೆಗೆ ಮಕ್ಕಳನ್ನೂ ಜವಾಬ್ದಾರಿಯಂತೆ ಬೆಳೆಸಬೇಕಾಗುತ್ತದೆ. ಮಕ್ಕಳ ಮುಂದಿನ ದಿನಗಳು ಚೆನ್ನಾಗಿರಬೇಕು ಎಂದು ಭದ್ರತೆಯನ್ನು ಒದಗಿಸುವುದರಲ್ಲಿಯೇ ಎಲ್ಲ ಅಪ್ಪ ಅಮ್ಮಂದಿರು ಮುಳುಗಿರುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಅವರ ಬಾಲ್ಯದಾಟ ಪಾಠಗಳನ್ನು ಕಂಡು ಸಂತೋಷಪಡುತ್ತಾ ಕೂರುವುದಕ್ಕೆ ಸಮಯವೆಲ್ಲಿದೆ ಎಂದು ಬದುಕಿನ ಓಟದೊಡನೆ ಸಾಗುವುದು ಅನಿವಾರ್ಯವಾಗುತ್ತದೆ.

ಜವಾಬ್ದಾರಿಗಳು ತುಸು ಕಡಿಮೆ ಆಗಿ, ಹಗುರಾಗುತ್ತಲೇ, ಮೊಮ್ಮಕ್ಕಳು ಜೊತೆಯಾಗಿ ಬಿಟ್ಟರೆ ಅಜ್ಜ–ಅಜ್ಜಿ ಮತ್ತು ಮೊಮ್ಮಕ್ಕಳು ಸ್ನೇಹಿತರಾಗಿಬಿಡುತ್ತಾರೆ. ಮನೆಯೊಳಗಿನ ಸಿಟ್ಟು ಸೆಡವು, ಬೇಸರಗಳು, ದುಃಖ ದುಮ್ಮಾನ, ಜಗಳಗಳನ್ನೆಲ್ಲ ಸರಿಪಡಿಸಬೇಕಾದರೆ ಮಕ್ಕಳೇ ಬೇಕಲ್ಲವೇ? ನಿಂತುಹೋದ ಮಾತುಗಳನ್ನು ಆರಂಭಿಸಲು ಮಕ್ಕಳಿಗಿಂತ ಉತ್ತಮರು ಯಾರು. ಹೀಗೆ ಋಣಾತ್ಮಕ ವಿಚಾರಗಳನ್ನೆಲ್ಲ ತಳಕ್ಕೆ ನೂಕಿ, ನಗುವಿನ ಹೂವರಳಿಸುವ ಸಾಮರ್ಥ್ಯ ಅವರಿಗಿದೆ. ಅಷ್ಟೊಂದು ಸುಂದರ ವಾತಾವರಣ ಸೃಷ್ಟಿಸಬಲ್ಲವರಾದರೆ, ದೊಡ್ಡವರೂ ಒಳಿತಿನ ಯೋಚನೆಯೊಂದನ್ನು ಮಾಡಲು ಹಿಂದೇಟು ಯಾಕೆ ಹಾಕಬೇಕು?

ಪ್ರತಿಕ್ರಿಯಿಸಿ: feedback@sudha.co.in